**ದಿನಾಂಕ: 27-06-2018 ರಂದು ಮಧ್ಯಾಹ್ನ 2-30 ಘಂಟೆಗೆ ಜಿಲ್ಲಾ ಪಂಚಾಯತ ಸಭಾ ಭವನದಲ್ಲಿ ಸನ್ಮಾನ್ಯ ಶ್ರೀ ಅನಂತಕುಮಾರ ಹೆಗಡೆ, ಮಾನ್ಯ ಕೇಂದ್ರ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತಾ ರಾಜ್ಯ ಸಚಿವರು, ಭಾರತ ಸರಕಾರ ಹಾಗೂ ಉತ್ತರ ಕನ್ನಡ ಜಿಲ್ಲಾ ಮಟ್ಟದ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ(ದಿಶಾ) ಸಮಿತಿ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಉತ್ತರ ಕನ್ನಡ ಜಿಲ್ಲಾ ಮಟ್ಟದ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ(ದಿಶಾ) ಸಮಿತಿ ಸಭೆಯ ನಡುವಳಿಗಳು.**

ಪ್ರಾರಂಭದಲ್ಲಿ ಉಪಕಾರ್ಯದರ್ಶಿ(ಆಡಳಿತ) ಜಿ.ಪಂ. ಕಾರವಾರ ರವರು ಸಭೆಗೆ ಆಗಮಿಸಿದ ಸನ್ಮಾನ್ಯ ಶ್ರೀ ಅನಂತಕುಮಾರ ಹೆಗಡೆ, ಕೇಂದ್ರ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತಾ ರಾಜ್ಯ ಸಚಿವರು, ಭಾರತ ಸರಕಾರ ಹಾಗೂ ಅಧ್ಯಕ್ಷರು ಉತ್ತರ ಕನ್ನಡ ಜಿಲ್ಲಾ ಮಟ್ಟದ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ(ದಿಶಾ) ಸಮಿತಿ ರವರಿಗೆ ಸ್ವಾಗತ ಕೋರಿದರು. ಅದರಂತೆ ಸಭೆಗೆ ಹಾಜರಿದ್ದ ಕಾರವಾರ-ಅಂಕೋಲಾ, ಕುಮಟಾ-ಹೊನ್ನಾವರ ಮತ್ತು ಹೊನ್ನಾವರ-ಭಟ್ಕಳ ವಿಧಾನಸಭಾ ಸದಸ್ಯರಿಗೆ, ನಾಮ ನಿರ್ದೇಶಿತ ಸದಸ್ಯರುಗಳಿಗೆ, ಮಾನ್ಯ ಜಿಲ್ಲಾಧಿಕಾರಿಗಳು ಸಮವರ್ತಿತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು, ಅಧ್ಯಕ್ಷರು,ಜಿಲ್ಲಾ ಪಂಚಾಯತರವನ್ನು, ಅಧ್ಯಕ್ಷರು, ತಾಲೂಕ ಪಂಚಾಯತರವರುಗಳನ್ನು ಸ್ವಾಗತಿಸಿದರು. ಹಾಗೂ ಅಲ್ಲದೇ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳನ್ನು ಪತ್ರಕರ್ತರನ್ನು ಸ್ವಾಗತಿಸಿ,ಇಂದಿನ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಸಭೆಯನ್ನು ನಡೆಸಿಕೊಡುವಂತೆ ದಿಶಾ ಸಮಿತಿ ಅಧ್ಯಕ್ಷರು ಹಾಗೂ ಮಾನ್ಯ ಕೇಂದ್ರ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತಾ ರಾಜ್ಯ ಸಚಿವರು, ಭಾರತ ಸರಕಾರ ರವರಲ್ಲಿ ವಿನಂತಿಸಿಕೊಂಡರು.

ಮಾನ್ಯ ಕೇಂದ್ರ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತಾ ರಾಜ್ಯ ಸಚಿವರು, ಭಾರತ ಸರಕಾರ ರವರು ಅಧ್ಯಕ್ಷತೆಯನ್ನು ವಹಿಸಿಕೊಂಡು ಪ್ರಾರಂಭದಲ್ಲಿ ದಿನಾಂಕ:22-08-2017 ರಂದು ಜರುಗಿದ ಜಿಲ್ಲಾ ಮಟ್ಟದ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ(ದಿಶಾ) ಸಮಿತಿ ಸಭೆಯ ನಡವಳಿಗಳ ಮೇಲೆ ಸಂಬಂಧಿಸಿದ ಇಲಾಖೆಯವರ ಪಾಲನಾ ವರದಿಯನ್ನು ಪರಿಶೀಲಿಸಿ, ಕೇಂದ್ರ ಸರಕಾರದ ಈ ಕೆಳಕಂಡ ವಿವಿಧ ಯೋಜನೆಗಳಡಿ ಇಲಾಖೆಯವರು ಸಾಧಿಸಿದ ಪ್ರಗತಿಯ ಕುರಿತು ಪರಿಶೀಲನೆ ನಡೆಸಿದರು.

1) <u>ವಸತಿ:</u>

ಸಭೆಯಲ್ಲಿ ಪ್ರಧಾನ ಮಂತ್ರಿ ಅವಾಸ ಯೋಜನೆ(**PMAY**)ಯಡಿ ಮಂಜೂರಾದ ಮನೆಗಳ ಸ್ಥಿತಿಗತಿಗಳ ಬಗ್ಗೆ ವಿಚಾರಿಸಲಾಯಿತು. ಸದರಿ ಯೋಜನೆಯಡಿ 615 ಮನೆಗಳು ಮಂಜೂರಾಗಿದ್ದು, ಅವುಗಳಲ್ಲಿ 101 ಮನೆಗಳು ವಿವಿಧ ಹಂತದಲ್ಲಿದ್ದು, 15 ಮನೆಗಳು ಪೂರ್ಣಗೊಂಡಿದ್ದು 92 ಕಾಮಗಾರಿಗಳು ಬಾಕಿ ಇರುವುದಾಗಿ ಸಹಾಯಕ ಕಾರ್ಯದರ್ಶಿಗಳು(ಅಭಿವೃದ್ಧಿ) ರವರು ಮಾಹಿತಿ ನೀಡಿದರು. ಪ್ರಗತಿ ವರದಿಯನ್ನು ಆಲಿಸಿದ ಮಾನ್ಯ ಸಂಸದರು ಕಾರವಾರ ಹಾಗೂ ಹಳಿಯಾಳ ಅಲ್ಲದೇ ಕರಾವಳಿ ಭಾಗದಲ್ಲಿ ಪ್ರಗತಿ ತುಂಬಾ ಕುಂಠಿತವಾಗಿವುದಾಗಿ ಅಸಮಾಧಾನ ವ್ಯಕ್ತಪಡಿಸಿದರು.

ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಬಗ್ಗೆ ವಿಚಾರಿಸಿ, ಯಾವ ತಿಂಗಳಲ್ಲಿ ಮುಗಿಸುತ್ತೀರಿ ಎಂದು ಪ್ರಶ್ನಿಸಿದರು. ಆಗ ಮಾನ್ಯ ಜಿಲ್ಲಾಧಿಕಾರಿಗಳು 2011 ರ ಎಸ್‌ಇಸಿಸಿ ಸಮೀಕ್ಷೆಯ ಪಟ್ಟಿಯಲ್ಲಿರುವ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಬೇಕಾಗುತ್ತದೆ. ಜುಲೈ ತಿಂಗಳಿನಿಂದ ಅಕ್ಟೋಬರ್ ತಿಂಗಳಿನವರೆಗೆ ಆಯ್ಕೆ ಪ್ರಕ್ರಿಯೆ ಕೈಗೊಂಡು ಫಲಾನುಭವಿಗಳ ಯಾದಿ ತಯಾರಿಸಿ, ಸದರಿ ಯಾದಿಯನ್ನು ಗ್ರಾಮ ಸಭೆಯ ಅನುಮೋದನೆ ಪಡೆಯಬೇಕಾಗಿದ್ದು, ನವೆಂಬರ್-15 ರ ನಂತರ ಪೂರ್ಣಗೊಳಿಸುವುದಾಗಿ ವಿವರಿಸಿದರು. ಮುಂದಿನ ದಿನಗಳಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆನ್ನು ಸುಧಾರಿಸಿಕೊಳ್ಳುವಂತೆ ಸೂಚಿಸಲಾಯಿತು.

ಎಸ್.ಸಿ/ಎಸ್.ಟಿ. ಫಲಾನುಭವಿಗಳು ಜಿಲ್ಲೆಯಲ್ಲಿ ಸಿಗದೇ ಇರುವುದರಿಂದ ಪ್ರಗತಿ ಕುಂಠಿತವಾಗಿರುವುದನ್ನು ಒಪ್ಪಬಹುದು ಆದರೆ ಜನರಲ್ ಕೆಟಗರಿಯಲ್ಲಿ ಸಾಧನೆ ಆಗಿರುವುದಿಲ್ಲ. ಇದಕ್ಕೆ ಎನು ಕಾರಣ? ಎಂದು ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಪ್ರಶ್ನಿಸಿ, ಈ ವಿಷಯವನ್ನು ಅಧಿಕಾರಿಗಳು ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ.ಆಯ್ಕೆಯಾದ ಮನೆಗಳನ್ನು ಪೂರ್ಣಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳುತ್ತಿಲ್ಲ. ಇಲಾಖೆಯಿಂದ ಸರಿಯಾಗಿ ಪರಿಶೀಲನೆ ಆಗುತ್ತಿಲ್ಲ. ಕಾರ್ಯನಿರ್ವಾಹಕ ಅಧಿಕಾರಿಗಳು, ಪಂಚಾಯತ ಅಭಿವೃದ್ದಿ ಅಧಿಕಾರಿಗಳು ಮತ್ತು ಕಾರ್ಯದರ್ಶಿಗಳು ಇದರ ಬಗ್ಗೆ ಗಮನಹರಿಸುತ್ತಿಲ್ಲ. ಕೆಲಸದಲ್ಲಿ ಗಂಭೀರತೆ ಇಲ್ಲ. ಉತ್ತರ ಕನ್ನಡ

ಜಿಲ್ಲೆಯಲ್ಲಿ ಪ್ರಧಾನ ಮಂತ್ರಿ ಅವಾಸ ಯೋಜನೆ(PMAY) ಯ ಬಗ್ಗೆ ಸರಿಯಾಗಿ ಗಮನಹರಿಸುತ್ತಿಲ್ಲ ಎಂಬ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ರಾಜೀವ್ ಗಾಂಧಿ ಗ್ರಾಮೀಣ ವಸತಿಯೋಜನೆಯಡಿ ತಮ್ಮ ಸಂಸ್ಥೆಯಿಂದ 1800 ಮನೆಗಳನ್ನು ಫಲಾನುಭವಿಗಳಿಗೆ ಕಟ್ಟಿಕೊಟ್ಟಿದ್ದು, ಸಾಲ ಮರುಪಾವತಿ ಕೂಡ ಆಗಿರುವುದಾಗಿ ಮಾನ್ಯ ಸಚಿವರು ತಿಳಿಸಿದರು.

ಸದರಿ ಯೋಜನೆಯಡಿ ಅರ್ಧಕ್ಕೆ ನಿಂತ ಮನೆಗಳನ್ನು ಪೂರ್ಣಗೊಳಿಸದೇ ಇರುವವರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ ಎಂದು ಪ್ರಶ್ನಿಸಿದರು. ಸದರಿಯವರಿಗೆ ನಿಗಮದಿಂದ ನೋಟಿಸು ಜಾರಿ ಮಾಡಿರುವುದಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದರು.

ಗ್ರಾಮ ಪಂಚಾಯತ ಮಟ್ಟದಲ್ಲಿ ಪ್ರಗತಿ ಪರಿಶೀಲನೆ ಮಾಡುವ ಬಗ್ಗೆ ಸಭೆ ಮಾಡಿ, ನಿಗದಿತ ಸಮಯದೊಳಗೆ ಮನೆಗಳನ್ನು ಪೂರ್ಣಗೊಳಿಸದಿದ್ದಲ್ಲಿ ಮನೆಗಳನ್ನು ರದ್ದುಗೊಳಿಸುವುದಾಗಿ ತಿಳಿಸುವಂತೆ ಸಂಬಂಧಪಟ್ಟವರಿಗೆ ಸೂಚಿಸಿದರು.

ಕಾರವಾರದಲ್ಲಿ 19 ರಲ್ಲಿ 0.ಕುಮಟಾದಲ್ಲಿ 58 ರಲ್ಲಿ 2 ಪ್ರಾರಂಭಿಸಿದ್ದು ಕರಾವಳಿಯಲ್ಲಿ ಪ್ರಗತಿ ತುಂಬಾ ಕಡಿಮೆ ಇದೆ. ಇದಕ್ಕೆ ಕಾರಣ ಕೇಳಿದರು.

ಕುಮಟಾ ಶಾಸಕರು,ಫಲಾನುಭವಿಗಳ ಅಯ್ಕೆಯ ಮಾನದಂಡಗಳ ಬಗ್ಗೆ ವಿಚಾರಿಸಿದರು. ಜಿಲ್ಲಾಧಿಕಾರಿಗಳು ಈ ಬಗ್ಗೆ ಮಾಹಿತಿ ನೀಡಿದರು. ಈ ಕುರಿತು ಇರುವ ಮಾರ್ಗಸೂಚಿಯ/ಮಾನದಂಡದ ಬಗ್ಗೆ ಸರಿಯಾದ ಮಾಹಿತಿ ತೆಗೆದುಕೊಳ್ಳಬೇಕು ಎಂದರು.

ಸದರಿ ಯೋಜನೆಯ ಕಾಮಗಾರಿಗಳ ಕುರಿತು ವಿವರವಾಗಿ ಪರಿಶೀಲನೆ ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು. ಹಾಗೂ ಪ್ರಾರಂಭಿಸದೇ ಇದ್ದ ಮನೆಗಳ ಬಗ್ಗೆ ಕ್ರಮ ಜರುಗಿಸಲು ತಿಳಿಸಲಾಯಿತು.

(ಕ್ರಮ: ಉಪಕಾರ್ಯದರ್ಶಿ(ಅಭಿವೃದ್ಧಿ)ಜಿ.ಪಂ./ಕಾರ್ಯನಿರ್ವಾಹಕ ಅಧಿಕಾರಿ ತಾ.ಪಂ./ಪಿ.ಡಿ.ಓ.)

2) ಎಂ.ಜಿ.ಎನ್.ಆರ್.ಇ.ಜಿ.ಎಸ್.:

ಸಚಿವರಿಗೆ ನರೇಗಾ ಅಡಿಯಲ್ಲಿ ಸಾಧಿಸಿದ ಪ್ರಗತಿ ವಿವರವನ್ನು ನೀಡಲಾಯಿತು.

3) ಎನ್.ಆರ್.ಎಲ್.ಎಂ:

ಸಿಂಡ್ ಆರ್.ಸೆಟಿ ಹಾಗೂ ಹಳಿಯಾಳ ದೇಶಪಾಂಡೆ ಆರ್ ಸೆಟಿ ಸಂಸ್ಥೆಗಳು ಎಷ್ಟು ಅಭ್ಯರ್ಥಿಗಳಿಗೆ ತರಬೇತಿ ನೀಡಿದೆ ಮತ್ತು ಎಷ್ಟು ಮಂದಿ ಉದ್ಯೋಗಸ್ಥರಾಗಿದ್ದಾರೆ ಎಂದು ಮಾಹಿತಿ ಪಡೆದರು.

ನಿರ್ದಿಷ್ಟ ಒಂದು ತರಬೇತಿಯಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳು ಬೇರೆ ಬೇರೆ ರಾಜ್ಯಗಳಲ್ಲಿ ಕೆಲಸ ಮಾಡಿ ಅವರ ಜೀವನ ಮಟ್ಟ ಸುಧಾರಿಸಿದವರ ಪಟ್ಟಿ ತಯಾರಿಸಿ ಅವರು ತರಬೇತಿ ಪಡೆಯುವ ಮೊದಲಿನ ಜೀವನ ಮಟ್ಟ ಹಾಗೂ ತರಬೇತಿ ಪಡೆದ ನಂತರದ ಜೀವನ ಮಟ್ಟದ ಬಗ್ಗೆ ವರದಿ ಸಲ್ಲಿಸುವಂತೆ ಆರ್.ಸೆಟಿ ಹಳಿಯಾಳ ಮತ್ತು ಕುಮಟಾ ರವರಿಗೆ ತಿಳಿಸಿದಾಗ, ನಮ್ಮ ಸಂಸ್ಥೆಯಲ್ಲಿ ತರಬೇತಿ ಪಡೆದ ಎಲ್ಲಾ ಅಭ್ಯರ್ಥಿಗಳ ಮಾಹಿತಿ ಲಭ್ಯವಿದ್ದು, ಒಮ್ಮೆ ನಮ್ಮ ತರಬೇತಿ ಸಂಸ್ಥೆಗಳಿಗೆ ಬೇಟಿ ನೀಡುವಂತೆ ಆರ್.ಸೆಟಿಯವರು ಮಾನ್ಯ ಸಚಿವರಿಗೆ ಆಹ್ವಾನಿಸಿದರು.

(ಕ್ರಮ:ನಿರ್ದೇಶಕರು,ತರಬೇತಿ ಕೇಂದ್ರ ಕುಮಟಾ/ಹಳಿಯಾಳ,ಯೋಜನಾನಿರ್ದೇಶಕರು (ಡಿ.ಆರ್.ಡಿ.ಎ.))

4) ಪಿ.ಎಂ.ಜಿ.ಎಸ್.ವೈ.:

ಪಿ.ಎಂ.ಜಿ.ಎಸ್.ವೈ. ಯಡಿ Maintenance grant stutus ಬಗ್ಗೆ ವಿಚಾರಿಸಿದರು. ಸದರಿ ಅನುದಾನದ ಪ್ರಸ್ತಾವನೆಯನ್ನು ಸರಕಾರಕ್ಕೆ ಕಳುಹಿಸಲಾಗಿದೆ. Phase-2 ಕಾಮಗಾರಿ ಪೂರ್ಣಗೊಂಡಿರುವುದಾಗಿ ಅಧಿಕಾರಿಗಳು ತಿಳಿಸಿದರು. ಸದರಿ ಅನುದಾನ ತರುವ ಬಗ್ಗೆ ಶಾಸಕರೊಂದಿಗೆ ಚರ್ಚಿಸಿ, ಅವರ ಸಲಹೆ ಸೂಚನೆ ಪಡೆಯುವಂತೆ ಸೂಚಿಸಲಾಯಿತು.

(ಕ್ರಮ: ಪಿ.ಎಂ.ಜಿ.ಎಸ್.ವೈ. ಕಾರ್ಯನಿರ್ವಾಹಕ ಅಭಿಯಂತರರು)

5) ಸಂಸತ ಆದರ್ಶ ಗ್ರಾಮ:

ಈ ಯೋಜನೆಯಡಿಯಲ್ಲಿ ಕಾನಗೋಡ (ಸಿದ್ದಾಪುರ ತಾಲೂಕ) ಆಯ್ಕೆ ಆಗಿದ್ದು, 28 ಪ್ರೊಜೆಕ್ಟ್‌ಗಳನ್ನು ತೆಗೆದುಕೊಂಡಿದ್ದು, 3 ಪ್ರೊಜೆಕ್ಟಗಳು ಮುಗಿದಿವೆ. 9 ಪ್ರಾರಂಭಿಸಲಾಗಿದೆ. ಉಳಿದ

ಪ್ರೊಜೆಕ್ಟ್‌ಗಳಿಗೆ ಅನುದಾನದ ಲಭ್ಯತೆ ಇರದ ಕಾರಣ ಪ್ರಾರಂಭಿಸಿಲ್ಲ. ಎಸ್.ಐ.ಜೆ.ವೈ. ಅಡಿಯಲ್ಲಿ 18 ಮನೆಗಳು ಮುಗಿದಿವೆ ಎಂದು ಅಧಿಕಾರಿಗಳು ತಿಳಿಸಿದರು.

6. ಕುಡಿಯುವ ನೀರು:

ಮುಂಡಗೋಡ-ಹಳಿಯಾಳ ತಾಲೂಕುಗಳಲ್ಲಿರುವ ನೀರಿನ ಗುಣಮಟ್ಟದ ಬಗ್ಗೆ ವಿಚಾರಿಸಿದರು. ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ತುಂಬಾ ಇದೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಗಳೊಂದಿಗೆ ಚರ್ಚಿಸಿ, ಕುಡಿಯುವ ನೀರಿನ ಸಮಸ್ಯೆಗಳನ್ನು ಸರಿಪಡಿಸಿಕೊಳ್ಳುವಂತೆ ಸೂಚಿಸಲಾಯಿತು.

2048 Habitation ಗಳಲ್ಲಿ ಕಂಟೆಮನೆಟೆಡ್ Organic ಅಂಶ ಇದ್ದು ಕುಡಿಯಲು ಅಯೋಗ್ಯವಾಗಿದೆ. ಕುಡಿಯುವ ನೀರಿಗಾಗಿ ಅಳವಡಿಸಿರುವ ಪೈಪ್ ಲೈನ್‌ಗಳಲ್ಲಿ ಬ್ಯಾಕ್ಟೀರಿಯಾಗಳನ್ನು ನಾಶಗೊಳಿಸಲು ಮೈಕ್ರೊವೆಲ್ ಟೆಕ್ನೊಲೊಜಿಯನ್ನು ಉಪಯೋಗಿಸಲು ಸೂಚಿಸಲಾಯಿತು.
ಬಹುಗ್ರಾಮ ಯೋಜನೆಯಡಿ ಆಯ್ಕೆಯಾದ ಗೋಕರ್ಣ ಕುಡಿಯುವ ನೀರು ಯೋಜನೆಯ ಡಿ.ಪಿ.ಆರ್. ತಯಾರಾಗಿದ್ದು, ಕೂಡಲೇ ಟೆಂಡರ್ ಪ್ರಕ್ರಿಯೆ ಕೈಗೊಂಡು ಕಾಮಗಾರಿ ಪೂರ್ಣಗೊಳಿಸಲು ಸೂಚಿಸಿದರು.

ಹಿಂದಿನ ಸಭೆಯಲ್ಲಿ ತಿಳಿಸಿದಂತೆ ಪ್ರತಿ ಗ್ರಾಮ ಪಂಚಾಯಗಳಲ್ಲಿರುವ ನೀರಿನ ಟ್ಯಾಂಕ್ ಸ್ವಚ್ಛತೆಗಾಗಿ ಆ್ಯಂಟಿ ಬ್ಯಾಕ್ಟೀರಿಯಾ ಟ್ರೀಟ್‌ಮೆಂಟ್ ಮಾಡಿಸಲು ರೂ. 10000-00 ಗಳನ್ನು ಬಿಡುಗಡೆ ಮಾಡುತ್ತಿರುವ ಬಗ್ಗೆ ವಿಚಾರಿಸಿ, ಗ್ರಾಮ ಪಂಚಾಯತಿಗಳಿಗೆ ಬೇಟಿ ಮಾಡಿ ಆ್ಯಂಟಿ ಬ್ಯಾಕ್ಟೀರಿಯಾ ಟ್ರೀಟ್‌ಮೆಂಟ್ ಬಗ್ಗೆ ಪರಿಶೀಲಿಸಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಸೂಚಿಸಿದರು. Potable water (ಕುಡಿಯಲು ಯೋಗ್ಯವಾದ ನೀರು) ಸಿಗುವ ದಿಶೆಯಲ್ಲಿ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.
Coverage & Quality ಯಡಿ ಬರುವ ಕಾಮಗಾರಿಗಳ ಬಗ್ಗೆ ಹಾಗೂ ಮಂಜೂರಾದ ಅನುದಾನ ಬಗ್ಗೆ ಶಾಸಕರ ಗಮನಕ್ಕೆ ತರುವಂತೆ ಸೂಚಿಸಲಾಯಿತು.

(ಕ್ರಮ: ಕಾರ್ಯನಿರ್ವಾಹಕ ಅಭಿಯಂತರರು, (RWS)/ಜಿಲ್ಲಾ ಆರೋಗ್ಯ ಅಧಿಕಾರಿಗಳು)

7) ಸ್ವಚ್ಛ ಭಾರತ ಮಶೀನ್:

ಸದರಿ ಯೋಜನೆಯಡಿ ಜಿಲ್ಲೆ ಶೇ.91 ರಷ್ಟು ಪ್ರಗತಿ ಸಾಧಿಸಿದ್ದು, ಬಯಲು ಶೌಚ ಮುಕ್ತ ಜಿಲ್ಲೆಯನ್ನಾಗಿಸಿದರೂ ಜನರು ಶೌಚಾಲಯವಿದ್ದವರೂ ಬಯಲು ಬಹಿರ್ದೆಸೆಗೆ ತೆರಳುತ್ತಿದ್ದಾರೆ.12-15 ವರ್ಷಗಳ ಹಿಂದೆ ಕೆಲವರು ಕಟ್ಟಿಕೊಂಡ ಶೌಚಾಲಯಗಳು ಹಾಳಾಗಿದ್ದು, ಕಟ್ಟಿಕೊಳ್ಳುವ ಪರಿಸ್ಥಿತಿಯಲ್ಲಿ ಇಲ್ಲ ಪಟ್ಟಿಯಲ್ಲಿ ಸೇರಿಸಲು ಆಗುತ್ತಿಲ್ಲ. ದುರಸ್ಥಿಯಾಗ ಬೇಕಾದ ಶೌಚಾಲಯಗಳಿಗೆ ಅನುದಾನದ ಕೊರತೆ ಇರುವುದಾಗಿ ಉಪಕಾರ್ಯದರ್ಶಿ (ಆಡಳಿತ),ಜಿಲ್ಲಾ ಪಂಚಾಯತ ರವರು ವಿವರಿಸಿದರು. ಸಚಿವರು ಶೇ. 100% ODF ಮಾಡುವ ಬಗ್ಗೆ Follow up ಮಾಡಲು ಸೂಚಿಸಿದರು.

(ಕ್ರಮ: ಉಪಕಾರ್ಯದಶಿ (ಆಡಳಿತ),ಜಿಲ್ಲಾ ಪಂಚಾಯತ)

8) ತೋಟಗಾರಿಕೆ/ನಬಾರ್ಡ/ಎ.ಪಿ.ಎಂ.ಸಿ:

ಬಾಳೆ ನಾರಿನಿಂದ ವಸ್ತುಗಳನ್ನು ತಯಾರಿಸುವ ಘಟಕಕ್ಕೆ ರೈತರಿಗೆ ಪ್ರವಾಸ ಕೈಗೊಂಡ ಬಗ್ಗೆ ವಿಚಾರಿಸಲಾಯಿತು. ಈ ವರ್ಷ ಪ್ರವಾಸ ಕೈಗೊಳ್ಳುವುದಾಗಿ ಅಧಿಕಾರಿಗಳು ತಿಳಿಸಿದರು. ಕಾಳುಮೆಣಸಿಗೆ ಗ್ರೇಡಿಂಗ್ ನೀಡಿ ಬ್ರಾಂಡೆಡ್ ಮಾಡಲು ಹಾಗೂ ಜೇನು ಕೃಷಿಗೆ ವಿಪುಲ ಅವಕಾಶ ಇದ್ದು ಮಾರ್ಕೆಂಟಿಂಗ್ ಮಾಡುವ ಬಗ್ಗೆ ಕ್ರಮ ಜರುಗಿಸಲು ಸೂಚಿಸಲಾಯಿತು. ಹೊನ್ನಾವರದ ವಿಳ್ಯದೆಲೆಯ ಬಗ್ಗೆ ಕ್ರಮ ಜರುಗಿಸಲು ತಿಳಿಸಲಾಯಿತು. ಪಿ.ಎಂ.ಕೆ.ಎಸ್.ವೈ ಯೋಜನೆಯ ಪ್ರಗತಿ ವಿಚಾರಿಸಲಾಯಿತು.

ಗೋಕರ್ಣ ತರಕಾರಿಗಳಿಗೆ ಮಾರುಕಟ್ಟೆ ಒದಗಿಸಿಕೊಡಬೇಕು. ಮಾರುಕಟ್ಟೆ ಇಲ್ಲದೇ ರೈತರು ಬೆಳೆದ ತರಕಾರಿಗಳನ್ನು ಕಡಿಮೆ ಬೆಲೆಗೆ ಕೊಂಡೊಯ್ಯಲಾಗುತ್ತಿದ್ದು ರೈತರಿಗೆ ಹಾನಿಯಾಗುತ್ತಿದೆ. ಇದನ್ನು ತಪ್ಪಿಸಲು ನಬಾರ್ಡ ಹಾಗೂ ತೋಟಗಾರಿಕೆ ಇಲಾಖೆಯು ಜಂಟಿಯಾಗಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ನಬಾರ್ಡ ಅಧಿಕಾರಿಗಳು ಗೋಕರ್ಣದ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರದೇಶ ಪಟ್ಟಣದಿಂದ ದೂರವಿರುವುದರಿಂದ ರೈತರು ಹಿಂದೇಟು ಹಾಕುತ್ತಿದ್ದಾರೆ. ಪಟ್ಟಣದಲ್ಲಿ ಭಾಗದಲ್ಲಿ ಯಾವುದೇ ಸೂಕ್ತ ಜಾಗಗಳು ಸಿಗುತ್ತಿಲ್ಲ. ಇದ್ದ ಜಾಗೆ ತುಂಬಾ ಸಣ್ಣದಿದ್ದು, ಅಲ್ಲಿ ಎಲ್ಲ ರೈತರು ತರಕಾರಿಗಳನ್ನು ಇಟ್ಟುಕೊಳ್ಳಲು ಸಾಧ್ಯವಾಗುವುದಿಲ್ಲ ಎಂದು ವಿವರಿಸಿದರು. ಇದ್ದ

ಎಪಿಎಂಸಿ ಜಾಗೆಯನ್ನು ಸುಧಾರಣೆ ಮಾಡಿ ಮೂಲಭೂತ ಸೌಕರ್ಯ ಒದಗಿಸಿ ದಾಸ್ತಾನಿಗೆ ವ್ಯವಸ್ಥೆ ಮಾಡಿಕೊಡಿ, ತರಕಾರಿಗಳನ್ನು ಹರಾಜು ಮಾಡಲು ಕೇಂದ್ರವನ್ನು ತರೆದು ರೈತರು ಬೆಳೆದ ತರಕಾರಿಗಳಿಗೆ ಸೂಕ್ತ ಬೆಲೆ ದೊರೆಯುವಂತೆ ಮಾಡಿಕೊಡುವ ಬಗ್ಗೆ ವಿಳಂಬವಿಲ್ಲದೇ ಕ್ರಮ ವಹಿಸಲು ಸೂಚಿಸಿದರು.

(ಕ್ರಮ: ತೋಟಗಾರಿಕೆ ಇಲಾಖೆ/ನಬಾರ್ಡ/ಎಪಿಎಂಸಿ)

9. ಕೃಷಿ ಇಲಾಖೆ:

ಕಡಿಮೆ ಖರ್ಚಿನಲ್ಲಿ ನೆಲೆಗಡಲೆ ಬಿಡಿಸುವ ಯಂತ್ರವನ್ನು ಸಿ.ಐ.ಇ.ಇ. ಭೋಪಾಲ್‌ನಿಂದ ತಂದು ಕೃಷಿ/ತೋಟಗಾರಿಕೆ ಇಲಾಖೆಗಳಿಗೆ ಕೊಡುವ ವ್ಯವಸ್ಥೆ ಮಾಡುವಂತೆ ಜಿಲ್ಲಾ ಕೈಗಾರಿಕೆ ಕೇಂದ್ರ ರವರಿಗೆ ಸೂಚಿಸಿದರು.

ಸುಪರ್ ಪುಡ್ ಐಟಂಗಳ ಬಗ್ಗೆ ಪ್ರಾತಿಕ್ಷಿಕೆ ಮಾಡುವುದು. ಮಳೆ ಇಲ್ಲದೆ ಒಣ ಭೂಮಿಯಲ್ಲಿ ಬೆಳೆಯುವ ಉತ್ತಮ ಗುಣಮಟ್ಟದ ಪೋಷಣೆ ಇರುವ ಬೀಜಗಳನ್ನು ಜಿಲ್ಲೆಗೆ ತಂದು ಅವುಗಳನ್ನು ಬೆಳೆಸುವ ಬಗ್ಗೆ ಕ್ರಮ ವಹಿಸುವಂತೆ ಸೂಚಿಸಲಾಯಿತು.

**Soil Fertilizer improve** ಆಗಿರುವ ಬಗ್ಗೆ ವರದಿ ಸಲ್ಲಿಸುವಂತೆ ಸೂಚಿಸಲಾಯಿತು.

ರಾಷ್ಟ್ರೀಯ ಕೃಷಿ ವಿಕಾಸ (ಪಿಎಂಕೆಎಸ್‌ವೈ) ಯೋಜನೆಯಡಿಯಲ್ಲಿ 2009-10 ರಲ್ಲಿ ನಿರ್ಮಿಸಲಾದ ಚೆಕ್ ಡ್ಯಾಂಗಳ ಬಗ್ಗೆ ಅಧಿಕಾರಿಗಳು ಸಭೆಗೆ ವಿವರಿಸಿದರು. ಚೆಕ್ ಡ್ಯಾಂಗಳನ್ನು ನಿರ್ಮಿಸಿದ್ದು ಸಾರ್ಥಕವಾಗಿದೆಯೇ ಎಂದು ಪ್ರಶ್ನಿಸಿದರು. ಅಂತರ್ಜಲಮಟ್ಟ ಕಡಿಮೆ ಇರುವ ಪ್ರದೇಶಗಳನ್ನು ಗುರುತಿಸಿ ಚೆಕ್ ಡ್ಯಾಂ ನಿರ್ಮಿಸಿದ್ದೀರಿ. ಈಗ ಅಲ್ಲಿ ಅಂತರ್ಜಲಮಟ್ಟ ಸುಧಾರಿಸಿದೆಯೇ ಎಂದು ಪ್ರಶ್ನಿಸಿದರು. ಇದಕ್ಕೆ ಅಧಿಕಾರಿಗಳಿಂದ ಸರಿಯಾಗಿ ಉತ್ತರ ನೀಡದಿದ್ದಾಗ ಅಸಮಾಧಾನಗೊಂಡ ಸಚಿವರು ಸರ್ಕಾರ ನೀಡಿದ ಹಣ ಖರ್ಚು ಮಾಡಿ 10 ವರ್ಷವಾದರೂ ಉಪಯೋಗವಾಗಿರುವ ಬಗ್ಗೆ ತಿಳಿಯಲು ಸಾದ್ಯವಾಗಿಲ್ಲ ಎಂದ ಮೇಲೆ ಅನುದಾನ ಖರ್ಚು ಮಾಡಿದ್ದು ಎಷ್ಟು ಸಾರ್ಥಕವಾಯಿತು ಎಂದು ವಿಷಾದಿಸಿದರು. ವಿಶೇಷ ಅಭಿವೃದ್ಧಿ ಯೋಜನೆ(ಎಸ್.ಡಿ.ಪಿ.) ಅಡಿಯಲ್ಲಿ ಆಯ್ಕೆ ಆದ ಹಿಂದುಳಿದ ತಾಲೂಕುಗಳ ಆರ್.ಕೆ.ವಿ.ವೈ. ಕ್ರಿಯಾ ಯೋಜನೆಯನ್ನು ರಾಜ್ಯ ಕಛೇರಿಗೆ ಯಾರು ಕಳಿಸುತ್ತಾರೆ. ಈ ಬಗ್ಗೆ ಅಧಿಕಾರಿಗಳು ವಿವರ ನೀಡದೇ ಇದ್ದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಬೆಳೆ ವಿಮೆ: 2016-17ನೇ ಸಾಲಿನಲ್ಲಿ 34333 ಫಲಾನುಭವಿಗಳಿಗೆ ರೂ. 4931.80 ಲಕ್ಷ ಬಿಡುಗಡೆ ಮಾಡಿರುವುದಾಗಿ ಅಧಿಕಾರಿಗಳು ತಿಳಿಸಿದರು.

ಜಿಲ್ಲೆಯಲ್ಲಿ ಅತಿ ಹೆಚ್ಚು ವಿಮೆ ಹಣ ತುಂಬಿದ ಮತ್ತು ಅತಿ ಕಡಿಮೆ ವಿಮೆ ತುಂಬಿದ್ದ ತಾಲೂಕುಗಳು ವಿವರ ಒದಗಿಸಲು ತಿಳಿಸಿದರು.

(ಕ್ರಮ: ಕೃಷಿ ಇಲಾಖೆ)

10. ಶಿಕ್ಷಣ ಇಲಾಖೆ:

**STEM Education Sytem** ಜಿಲ್ಲೆಗೆ ಬಂದಿದೆಯೇ ಎಂದು ಪ್ರಶ್ನಿಸಿದರು. ಈಗಾಗಲೇ ಮಹಾರಾಷ್ಟ್ರ, ಹರಿಯಾಣದಲ್ಲಿ ಈ ಸಿಸ್ಟಮ್ ಜಾರಿಗೆ ಬಂದಿರುವುದಾಗಿ ತಿಳಿಸಿದರು. ಸದರಿ ವಿಷಯದ ಕುರಿತು ರಾಜ್ಯ ಸರಕಾರದಿಂದ ಆದೇಶ ಬಂದಿರುವುದಿಲ್ಲ ಎಂದು ಅಧಿಕಾರಿಗಳು ವಿವರಿಸಿದರು.

ಐ.ಈ.ಡಿ.ಎಸ್.ಎಸ್.ಅಡಿ ಪ್ರಗತಿ ಕಡಿಮೆಯಾಗಿದ್ದು,ಸದರಿ ಯೋಜನೆಯ ಡಾಟಾಗಳನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸುವಂತೆ ಸೂಚಿಸಲಾಯಿತು. ಇಕೋ ಕ್ಲಬ್ ಬಗ್ಗೆ ವಿಚಾರಿಸಿದರು.

ಲ್ಯಾಬ್‌ಕಿಟ್‌ಗಳನ್ನು ಆದಷ್ಟು ಬೇಗ ಪ್ರೌಢ ಶಾಲೆಗಳಿಗೆ ವಿತರಿಸುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

ಪ್ರಸ್ತುತ ಸಾಲಿನಲ್ಲಿ ಕೇಂದ್ರ ಸರಕಾರದಿಂದ ವಿಜ್ಞಾನ ಟೂರ್ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಕಳುಹಿಸಿಕೊಡುವ ಬಗ್ಗೆ ಕ್ರಮ ವಹಿಸುವಂತೆ ಸೂಚಿಸಲಾಯಿತು.

ಸರ್ವ ಶಿಕ್ಷ ಅಭಿಯಾನದಲ್ಲಿ ಹೊಸ ಅವಿಷ್ಕಾರದಲ್ಲಿ ತೆಗೆದುಕೊಂಡ ಕ್ರಮದ ಬಗ್ಗೆ ವಿಚಾರಿಸಿದರು.

11) ಅಕ್ಷರ ದಾಸೋಹ:

ಪ್ರತಿ ದಿನ ಮಕ್ಕಳಿಗೆ ನೀಡುತ್ತಿರುವ ಆಹಾರದ ಗುಣಮಟ್ಟದ ಪರೀಕ್ಷೆ ಬಗ್ಗೆ ವಿಚಾರಿಸಿದರು. ಡೆಸ್ಕ ಟಾಪ್ **Desk Top Monitoring** ಬಗ್ಗೆ ವಿವರ ಕೇಳಿದರು.

12) ಜಿಲ್ಲಾ ಕೈಗಾರಿಕೆ ಕೇಂದ್ರ:

ಅನಾನಾಸ ಎಲೆಗಳಿಂದ ನಾರು ತೆಗೆಯುವ ಮತ್ತು ಮೆಕ್ಕೆ ಜೋಳ ಬಿಡಿಸುವ ಟೆಕ್ನೋಲೊಜಿ ಬಗ್ಗೆ ರೈತರಿಗೆ ಡೆಮೋ ಮಾಡಿ ತೋರಿಸುವ ಬಗ್ಗೆ ಕ್ರಮ ವಹಿಸುವುದು ಮತ್ತು ಕೇಂದ್ರ ಸರಕಾರದಿಂದ ಸಿಸಲ್(ಕಲನಾರ) ಬಗ್ಗೆ ಮಾಹಿತಿ ತರಿಸಿಕೊಳ್ಳುವಂತೆ ಸೂಚಿಸಲಾಯಿತು.

ಕೆ.ವಿ.ಐ.ಬಿ. ಮತ್ತು ಜಿಲ್ಲಾಡಳಿತ ಸೇರಿ ಸ್ವಸಹಾಯ ಗುಂಪುಗಳಿಗೆ ಮಾರುಕಟ್ಟೆಗೆ ಅವಕಾಶ ಮಾಡಿಕೊಡುವಂತೆ ಸೂಚಿಸಿದರು.

(ಕ್ರಮ: ಜಿಲ್ಲಾ ಕೈಗಾರಿಕೆ ಕೇಂದ್ರ/ಕೆ.ವಿ.ಐ.ಬಿ.)

13) ಹೆಸ್ಕಾಂ:

ದೀನದಯಾಳ ವಿದ್ಯುತ್ತೀಕರಣ ಯೋಜನೆಯಡಿ ಅಂಕೋಲಾ ತಾಲೂಕಿನ ಹಟ್ಟಿಕೇರಿ ಮತ್ತು ಡೊಂಗ್ರಿಯಲ್ಲಿ ಕೆಲವು ಅರಣ್ಯ ಪ್ರದೇಶದಲ್ಲಿ ಬರುವ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿರುವುದಿಲ್ಲ ಎಂಬ ವಿಷಯವನ್ನು ಕಾರವಾರ-ಅಂಕೋಲಾ ಶಾಸಕರು ತಿಳಿಸಿದರು.

ಸದರಿ ಸ್ಥಳಕ್ಕೆ ಬೇಟಿ ನೀಡಿ ಪರಿಶೀಲಿಸುವಂತೆ ಸೂಚಿಸಿ, ಅರಣ್ಯ ಇಲಾಖೆಯ ಸಮಸ್ಯೆ ಇದ್ದಲ್ಲಿ ತಮ್ಮ ಗಮನಕ್ಕೆ ತರುವಂತೆ ಜಿಲ್ಲಾಧಿಕಾರಿಗಳು ಹೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದರು.

ಸದರಿ ಯೋಜನೆಯಡಿ ಇದುವರೆಗೂ ವಿದ್ಯುತ್ ಸಂಪರ್ಕ ಕಲ್ಪಿಸದೇ ಇರುವ ಬಾಕಿ ಮನೆಗಳ ಮಾಹಿತಿಯನ್ನು ಎಲ್ಲಾ ಶಾಸಕರಿಗೆ ಸಲ್ಲಿಸುವಂತೆ ಸೂಚಿಸಲಾಯಿತು. ಡಿ.ಡಿ.ಜಿ.ವಿ.ವೈ. ಬಗ್ಗೆ ಪ್ರಗತಿ ವರದಿಯನ್ನು ಶಾಸಕರಿಗೆ ಸಲ್ಲಿಸಲು ತಿಳಿಸಲಾಯಿತು.

(ಕ್ರಮ: ಹೆಸ್ಕಾಂ/ಕಾರವಾರ/ಸಿರ್ಸಿ/ಹೊನ್ನಾವರ/ದಾಂಡೇಲಿ)

14) ಮಹಿಳಾ ಮತ್ತು ಮಕ್ಕಳ ಇಲಾಖೆ:

ಈ ಜಿಲ್ಲೆಗೆ ಮಾತೃ ಪೂರ್ಣ ಯೋಜನೆ ಕೈಬಿಡುವಂತೆ ಕಾರವಾರ-ಅಂಕೋಲಾ ಶಾಸಕರು ತಿಳಿಸಿದರು. ಸದರಿ ವಿಷಯದ ಕುರಿತು ಬೆಂಗಳೂರಿನಲ್ಲಿ ನಡೆಯುವ ಸಭೆಗಳಲ್ಲಿ ಹಾಗೂ ಕೇಂದ್ರ ಕಚೇರಿಯ ಗಮನಕ್ಕೆ ತಂದಿರುವುದಾಗಿ ಅಧಿಕಾರಿಗಳು ವಿವರಿಸಿದರು.

ಈಗ ಮಾತೃ ವಂದನೆ ಎಂಬ ಹೊಸ ಯೋಜನೆ ಬಂದಿದ್ದು, ಸದರಿ ಯೋಜನೆಯಡಿ ಗರ್ಭಿಣಿ ಸ್ತ್ರೀಯರ ಬ್ಯಾಂಕ್ ಖಾತೆಗೆ ನೇರವಾಗಿ ಹಣ ಜಮಾ ಮಾಡಲಾಗುತ್ತಿದೆ. ಈಗಾಗಲೇ 20 ಸಾವಿರ ಅರ್ಜಿಗಳು ಬಂದಿದ್ದು, ಅವುಗಳಲ್ಲಿ ಸುಮಾರು 2000 ಅರ್ಜಿಗಳು ಸಣ್ಣಪುಟ್ಟ ಸಮಸ್ಯೆಗಳಿದ್ದು, ಸರಿ ಇರುವ ಎಲ್ಲಾ ಅರ್ಜಿಗಳಿಗೆ ಹಣ ಜಮಾ ಮಾಡಲಾಗಿದೆ ಎಂದು ಅಧಿಕಾರಿಗಳು ಸಭೆಗೆ ವಿವರಿಸಿದರು.ಸಮರ್ಪಕವಾಗಿ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ತಿಳಿಸಲಾಯಿತು.

(ಕ್ರಮ: ಮಹಿಳಾ ಮತ್ತು ಮಕ್ಕಳ ಇಲಾಖೆ)

15) ಡಿ.ಯು.ಡಿ.ಸಿ.:

ಪ್ರಧಾನ ಮಂತ್ರಿ ಅವಾಸ ಯೋಜನೆಯಡಿ ನಗರಸಭೆ ಕಾರವಾರ,ದಾಂಡೇಲಿ ಹಾಗೂ ಪುರಸಭೆ ಕುಮಟಾದಲ್ಲಿ ಪ್ರಗತಿ ಕುಂಠಿತವಾಗಿದ್ದು, ಸದರಿ ತಾಲೂಕುಗಳ ಸ್ಥಳೀಯ ನಗರ ಪ್ರದೇಶಗಳಲ್ಲಿ ಕಟ್ಟುನಿಟ್ಟಾಗಿ ಮೇಲ್ವಿಚಾರಣೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು.

(ಕ್ರಮ: ಡಿ.ಯು.ಡಿ.ಸಿ.)

ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಕೇಂದ್ರ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ,
ರಾಜ್ಯ ಸಚಿವರು ಹಾಗೂ
ಅಧ್ಯಕ್ಷರು ಜಿಲ್ಲಾ ಮಟ್ಟದ ಅಭಿವೃದ್ಧಿ ಸಮನ್ವಯ
ಮತ್ತು ಉಸ್ತುವಾರಿ(ದಿಶಾ) ಸಮಿತಿ,
ಉತ್ತರ ಕನ್ನಡ.

**Anantkumar Hegde**
Minister of State
Skill Development and Entrepreneurship
Government of India

ಸಂ:ಉ.ಕ./ಜಿಪಂ/(ದಿಶಾ)/ಸಿಆರ್-34/2018-19

ಉ.ಕ. ಜಿಲ್ಲಾ ಪಂಚಾಯತ ಕಾರ್ಯಾಲಯ,
(ಎನ್‌ಆರ್‌ಎಲ್‌ಎಮ್ ಶಾಖೆ)
ಕಾರವಾರ ದಿನಾಂಕ: 29-08-2018.

**ಪ್ರತಿ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.**

1. ಸನ್ಮಾನ್ಯ ಶ್ರೀ ಅನಂತಕುಮಾರ ಹೆಗಡೆ, ಕೇಂದ್ರ ಕೌಶಲ್ಯಾಭಿವೃದ್ಧಿ ಮತ್ತು ಉಧ್ಯಮಶೀಲತಾ ರಾಜ್ಯ ಸಚಿವರು, ಭಾರತ ಸರ್ಕಾರ ಇವರ ಆಪ್ತಕಾರ್ಯದರ್ಶಿಗಳಿಗೆ ಕಳುಹಿಸುತ್ತಾ, ಸನ್ಮಾನ್ಯ ಸಚಿವರ ಆದ್ಯ ಗಮನಕ್ಕೆ ತರಲು ಕೋರಿದೆ.
2. ಸನ್ಮಾನ್ಯ ಶ್ರೀ ಆರ್ ವಿ ದೇಶಪಾಂಡೆ, ಮಾನ್ಯ ಕಂದಾಯ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು ಹಾಗೂ ಉತ್ತರ ಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವರು, ವಿಧಾನ ಸೌಧ ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳಿಗೆ ಸಲ್ಲಿಸುತ್ತಾ, ಸನ್ಮಾನ್ಯ ಸಚಿವರ ಆದ್ಯ ಗಮನಕ್ಕೆ ತರಲು ಕೋರಿದೆ.
3. ಉತ್ತರ ಕನ್ನಡ ಜಿಲ್ಲಾ ಪಂಚಾಯತ ಅಧ್ಯಕ್ಷರು.
4. ಮಾನ್ಯ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಮಾನ್ಯ ವಿಧಾನ ಸಭಾ ಸದಸ್ಯರು, ಶಿರಸಿ.
5. ಮಾನ್ಯ ಶ್ರೀಮತಿ ರೂಪಾಲಿ ನಾಯ್ಕ,ವಿಧಾನ ಸಭಾ ಸದಸ್ಯರು, ಕಾರವಾರ.
6. ಮಾನ್ಯ ಶ್ರೀ ದಿನಕರ ಶೆಟ್ಟಿ, ಮಾನ್ಯ ವಿಧಾನ ಸಭಾ ಸದಸ್ಯರು, ಕುಮಟಾ.
7. ಮಾನ್ಯ ಶ್ರೀ ಶಿವರಾಮ ಹೆಬ್ಬಾರ, ಮಾನ್ಯ ವಿಧಾನ ಸಭಾ ಸದಸ್ಯರು, ಯಲ್ಲಾಪುರ.
8. ಮಾನ್ಯ ಶ್ರೀ ಸುನಿಲ ನಾಯ್ಕ, ಮಾನ್ಯ ವಿಧಾನ ಸಭಾ ಸದಸ್ಯರು, ಭಟ್ಕಳ.
9. ಮಾನ್ಯ ಶ್ರೀ ಎಸ್.ಎಲ್ ಘೋಟ್ನೇಕರ್, ವಿಧಾನ ಪರಿಷತ ಸದಸ್ಯರು, ಹಳಿಯಾಳ.
10. ಮಾನ್ಯ ಶ್ರೀ ಬಸವರಾಜ ಹೊರಟ್ಟಿ, ವಿಧಾನ ಪರಿಷತ್ ಸದಸ್ಯರು, ಹುಬ್ಬಳ್ಳಿ.
11. ಮಾನ್ಯ ಶ್ರೀ ಎಸ್.ವಿ. ಸಂಕನೂರ, ವಿಧಾನ ಪರಿಷತ್ ಸದಸ್ಯರು, ಗದಗ.
12. ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ, ಕಾರವಾರ.
13. ಜಿಲ್ಲೆಯ ಎಲ್ಲಾ ತಾಲೂಕ ಪಂಚಾಯತ ಅಧ್ಯಕ್ಷರುಗಳು.
14. ಜಿಲ್ಲಾ ಮಟ್ಟದ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ(ದಿಶಾ) ಸಭೆಯ ನಾಮನಿರ್ದೇಶಿತ ಸದಸ್ಯರುಗಳು.

1. ಶ್ರೀಮತಿ ಸುರಕ್ಷಾ ಸುರೇಶ ಬೋವಿ, ಕನಸಿನಗದ್ದೆ, ಪೋ: ಬೆಳಂಬರ, ತಾ: ಅಂಕೋಲಾ
2. ಶ್ರೀ ವಿನಾಯಕ ಸಿ. ನಾಯ್ಕ, ಹನುಮಗಿರಿ, ನೆಹರು ನಗರ, ತಾ: ಶಿರಸಿ.
3. ಶ್ರೀ ಉಮೇಶ ಬೀಜಾಪುರ, ಬಸವನಬೀದಿ, ಮುಂಡಗೋಡ.
4. ಶ್ರೀ ವಿನೋದ ನಾಯ್ಕ, ವಾಡಗೇರಿ, ರಾಯಲಕೇರಿ, ಹೊನ್ನಾವರ.

**ಪ್ರತಿಯನ್ನು ಮಾಹಿತಿಗಾಗಿ ಹಾಗೂ ನಡುವಳಿ ಮೇಲೆ ಅನುಪಾಲನಾ ವರದಿ ಸಲ್ಲಿಸಲು ತಿಳಿಸಿ ರವಾನಿಸಿದೆ.**

1. ಎಲ್ಲಾ ಶಾಖಾ ಮುಖ್ಯಸ್ಥರು, ಜಿಲ್ಲಾ ಪಂಚಾಯತ ಕಾರವಾರ.
2. ಕಾರ್ಯನಿರ್ವಾಹಕ ಅಭಿಯಂತರು, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕಾರವಾರ/ಶಿರಸಿ.
3. ಸಹಾಯಕ ಕಮೀಶನರ್, ಕಾರವಾರ/ಕುಮಟಾ/ಭಟ್ಕಳ/ಶಿರಸಿ.
4. ಜಿಲ್ಲೆಯ ಎಲ್ಲಾ ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು.
5. ಸಂಬಂಧ ಪಟ್ಟ ಅನುಷ್ಠಾನಾಧಿಕಾರಿಗಳಿಗೆ.

ಯೋಜನಾ ನಿರ್ದೇಶಕರು (ಡಿ,ಆರ್,ಡಿ,ಎ)
ಜಿಲ್ಲಾ ಪಂಚಾಯತ ಕಾರವಾರ, ಉ.ಕ